ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಇದು ಈಗಾಗಲೇ ಜಾರಿಯಲ್ಲಿರುತ್ತದೆ.

ಶ್ರೀ ಬಿ. ವೈ. ನೀಲೇಗೌಡ.—ಜಮೀನ್‌ದಾರರು ಹಿಡುವಳಿದಾರರಿಂದ ಹೆಚ್ಚು ಗುತ್ತಿಗೆ ಕೊಡಬೇಕೆಂದು ಒತ್ತಾಯಮಾಡಿ ಬರೆಸಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಅಲ್ಲಿ ಹಾಲಿ ಇರತಕ್ಕ ಅಮಲ್ದಾರರಿಗೆ ಕೆಲಸ ಜಾಸ್ತಿ ಇರುವುದರಿಂದ ಈ ಕೇಸುಗಳನ್ನು ವಿಚಾರಮಾಡಿ ಬೇಗ ತೀರ್ಮಾನಕೊಡತಕ್ಕ ಬಗ್ಗೆ ಒಬ್ಬ ಪ್ರತ್ಯೇಕ ಅಮಲ್ದಾರರನ್ನು ಅಲ್ಲಿಗೆ ಹಾಕುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದಕ್ಕೆ ಸದ್ಯದಲ್ಲಿ ಆವಶ್ಯಕತೆಯಿದ್ದಂತೆ ಕಂಡುಬರುತ್ತಿಲ್ಲ. ಅಷ್ಟು ಕೆಲಸ ಸಹ ಇರುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಜಮೀನ್ದಾರರು ಸಾಗುವಳಿದಾರರಿಂದ ಎಷ್ಟು ಗುತ್ತಿಗೆ ಕೊಡಬೇಕೆಂದು ಚೀಟಿಗಳನ್ನು ಬರೆಸಿಕೊಳ್ಳುತ್ತಿದ್ದಾರೆಂಬುದನ್ನು ತಾವು ವಿಚಾರಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಅದನ್ನೆಲ್ಲಾ ಕೇಳಬೇಕಾದ ಆವಶ್ಯಕತೆಯಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ತಾವು ಅವರು ಮೊದಲನಿಂದಲೂ ಎಷ್ಟು ಗುತ್ತಿಗೆ ಕೊಡುತ್ತಿದ್ದಾರೆಂಬುದನ್ನು ತಿಳಿದುಕೊಳ್ಳದೆ ಇದ್ದಲ್ಲಿ ಈಗ ಹೊಸದಾಗಿ ಬರೆಸಿಕೊಳ್ಳುವ ಗುತ್ತಿಗೆ ಹೆಚ್ಚಾಗಿದೆ ಅಥವಾ ಕಡಿಮೆಯಾಗಿದೆಯೆಂಬುದನ್ನು ಹೇಗೆ ನಿರ್ಧರಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ಹೆಚ್ಚು ಕಡಮೆಗಳಾದಲ್ಲಿ ಅವರು ತಾಲ್ಲೂಕು ಅಮಲ್ದಾರರಲ್ಲಿ ಫಿರ್ಯಾದುಮಾಡಿಕೊಳ್ಳಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಿಂದೆ ಏನು ಕೊಡುತ್ತಿದ್ದರೋ ಅದಕ್ಕಿಂತಲೂ ಹೆಚ್ಚಿಗೆ ಕೊಡಬೇಕೆಂದು ಹೇಳಿ ರೈತರಿಂದ ಬಲಾತ್ಕಾರಮಾಡಿ ಸಾಗುವಳಿ ಚೀಟಿ ಬರೆಸಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಬರೆದು ಕೊಟ್ಟರೆ ಅದು ರೈತರ ತಪ್ಪೇ ಏನಾ ಬೇರೆ ಯಾರದೂ ಅಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೆಚ್ಚಿನ ಗುತ್ತಿಗೆ ಕೊಡಲೇಬೇಕೆಂದೂ, ಹಾಗೆ ಕೊಡದಿದ್ದರೆ, ಜಮೀನುಗಳನ್ನು ಕಿತ್ತುಕೊಳ್ಳುವುದಾಗಿಯೂ ಜಮೀನ್ದಾರರು ರೈತರಿಗೆ ಕರಾರುಕಳಿಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ಸಂದರ್ಭಗಳಿದ್ದರೆ ಅವರು ಅಮಲ್ದಾರರಿಗೆ ಫಿರ್ಯಾದುಮಾಡಿಕೊಳ್ಳಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಾದರೆ ಈ ಕಾನೂನು ಜಾರಿಗೆ ಬಂದರೆ ವಕೀಲರಿಗೆ ತುಂಬಾ ಅನುಕೂಲವಾಗುತ್ತದೆಯಲ್ಲವೇ?

(ಉತ್ತರವಿಲ್ಲ.)

ಶ್ರೀ ಎಸ್. ಗೋಪಾಲಗೌಡ.—ಈಗ ಈ ಆಕ್ಟ್ ಜಾರಿಯಲ್ಲಿರುವ ಕಡೆಗಳಲ್ಲಿ ಇದು ಯಾವ ರೀತಿ ಕೆಲಸ ಮಾಡುತ್ತಿದೆಯೆಂಬ ಬಗ್ಗೆ ತಮಗೆ ವರದಿಗಳು ಬರುತ್ತಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ಬರುತ್ತಿವೆ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿ ಈಗ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿವೆಯೆಂದು ಅವರು ತಿಳಿಸಿದ್ದಾರೇನು?

**Sri Kadidal MANJAPPA.**—I have already said that it is too early to say definitely.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರತಕ್ಕ ಸಂಭವ ವಿದೆಯೇ?

**Sri Kadidal MANJAPPA.**—Government have no objection.

ಶ್ರೀ ಎಸ್. ಗೋಪಾಲಗೌಡ.—ಈಗ ಯಾವ ಯಾವ ಕಡೆಗಳಿಂದ ಈ ಆಕ್ಟ್‌ನ್ನು ಜಾರಿಗೆ ಕೊಡಬೇಕೆಂದು ತಮಗೆ ಒತ್ತಾಯ ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಕಡೆಗಳಿಂದ ಬರುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ-ಚಿತ್ರದುರ್ಗ ಜಿಲ್ಲೆಗಳಿಂದ ಅಂಥ ಒತ್ತಾಯಗಳೇನಾದರೂ ತಮಗೆ ಬಂದಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಬಂದಿವೆ. ಆದರೆ ಅದು ಸಾಧಕಬಾಧಕಗಳೇನೆಂಬುದನ್ನು ಇನ್ನೂ ಪರ್ಯಾಲೋಚನೆ ಮಾಡಬೇಕಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಪರ್ಯಾಲೋಚನೆ ಮಾಡಿ ಬೇಗ ಆ ಜಿಲ್ಲೆಗಳಿಗೆ ಈ ಆಕ್ಟ್‌ನ್ನು ಜಾರಿಗೆ ಕೊಡುವಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಸದ್ಯಕ್ಕೆ ಅಂಥ ಆಲೋಚನೆಗಳಾವುವೂ ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಆಕ್ಟ್‌ನ್ನು ಕಡೂರು ಚಿಕ್ಕಮಗಳೂರಿಗೆ ಅನ್ವಯಿಸುವಂತೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ಚಿಕ್ಕಮಗಳೂರಿನಲ್ಲಿ ಜಾರಿಯಲ್ಲಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರಿನ ಜನರು ಯಾರಾದರೂ ಕೇಳಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಯಾರೂ ಕೇಳಿರುವುದಿಲ್ಲ.

**Mr. SPEAKER.**—Questions Nos. 71, 110, 169 and 245—all those four are of similar nature. They may be taken up together.

---

## Foodgrains (Millets).

Q.—71. **Sri B. C. NANJUNDAIYA** (Kora).—

Will the Government be pleased to state:—

(*a*) the actual stock position of ragi in Government Depots on 31st December 1952;

(*b*) out of this quantity how much was imported from outside and at what rate;

(*c*) the actual cost price of ragi acquired in the State?

*A.*—**Sri H. SIDDAVEERAPPA** (Minister for Home and Industries).—

(*a*) One lakh three thousand seven hundred and forty-one pallas.

(*b*) About 1,000 pallas at Rs. 35-10-0 per palla including incidentals.

(*c*) Rs. 2 per palla towards purchase price and Rs. 3-4-0 per palla on an average towards incidentals.

*Q.*—110. **Sri S. SRINIVASA IYENGAR** (T.-Narsipur).—

Will the Government be pleased to state :—

(*a*) the total quantity of millets held by the Government on 1st January 1953 and the rate per palla at which this was purchased ;

(*b*) how much of this quantity was imported from outside the State and the cost involved ;

(*c*) when the sale price was revised and for what reasons ?

*A.*—**Sri H. SIDDAVEERAPPA.**—

(*a*) One lakh fifteen thousand seven hundred and seventy-five pallas. Rs. 23-4-0 to Rs. 39-12-8 per palla including incidentals.

(*b*) Twelve thousand and twenty pallas at Rs. 39-12-8 per palla.

(c) Sale price was revised with effect from 1st January 1953 so as to reduce the subsidy involved on the total quantity of millets programmed for import into the State during 1953.

*Q.*—169. **Sri T. MARIAPPA** (Periyapatna).—

Will the Government be pleased to state :—

(*a*) the quantity of foodgrains held in stock on 31st March 1952 and 31st December 1952 (rice, ragi, jola, etc.) ;

(*b*) the purchase price fixed for each of the commodities from the growers per palla ;

(c) the circumstances that led them to increase the issue prices of foodgrains ?

*A.*—**Sri H. SIDDAVEERAPPA.**—

(*a*)—

| ... | 31st March 1952 | 31st December 1952 |
|---|---|---|
| Paddy ... ... | 9,29,765 | 195,668 |
| Rice ... ... | 1,52,963 | 98,250 |
| Wheat ... ... | 1,43,995 | 74,410 |
| Wheat products ... | 6 881 | 12,803 |
| Ragi ... .. | 1,21,672 | 103,741 |
| Jola .. ... | 44,201 | 12,090 |
| Minor millets ... ... | 6,693 | 14 |

(*b*)—

| ... | Up to 17th November 1952 | From 17th November 1952 |
|---|---|---|
| | Per palla Rs. a. | Per palla Rs. |
| Paddy I ... ... | 21 0 | 25 |
| Do II ... ... | 19 0 | 23 |
| Ragi and jola .. | 20 0 | Not procured |
| Wheat ... | 30 8 | |

(*c*) To eliminate subsidy on food involved in importing larger quantities of foodgrains, particularly millets, at higher prices, during 1953.

*Q.*—245. **P. M. Sri SWAMIDURAI** (Kolar Gold Fields—Scheduled Castes).—

Will the Government be pleased to state : —

whether they will reduce the present price of millets ?

*A.*—**Sri H. SIDDAVEERAPPA.**—Taking the financial position into consideration, the matter requires to be considerd.

**Sri S SRINIVASA IYENGAR.**—Will the Government be pleased to state the total amount invested from 1st January 1953 on the purchase of the quantity noted in the replies ?

**Sri H. SIDDAVEERAPPA.**—I can give you the rate at which it has been imported. I have not got the actual amount spent on that.

**Sri S. SRINIVASA IYENGAR.**—Will the Government be pleased to state what amount they have realised by the revised sale price for the quantity they had held on 1st January 1953 ?

**Sri H. SIDDAVEERAPPA.**—I refer only to millets.

**Sri S. SRINIVASA IYENGAR.**—The question is with regard to millets.